**ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ**

**ಮತ್ತು ಜೆ.ಎಂ.ಎಫ್.ಸಿ ಬೀದರ.**

**ಸಿ.ಸಿ ನಂ. 1831/2024**

**ಚಾಸಾ: 01 ಪ್ರಾಸಾ : 1**

| | | |
|---|---|---|
| ಹೆಸರು | : | ಸಾಮವೇಲ್ |
| ತಂದೆ/ ಗಂಡನ ಹೆಸರು | : | ಸುಭಾಷ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ವಿಧ್ಯರ್ಥಿ |
| ವಾಸ | : | ಪ್ರತಾಪ ನಗರ ಬೀದರ. |

**ದಿನಾಂಕಃ 24-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಸ.ಸ.ಅ ರವರಿಂದಃ**

ಚಾಸಾ-2 ರಿಂದ 5 ಗೊತ್ತು. ಆರೋಪಿತರ ಪರಿಚಯ ಇದೆ. ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಬೈದಿಲ್ಲ ಕಲ್ಲಿನಿಂದ ಹೊಡೆದಿಲ್ಲ, ಜೀವದ ಬೇದರಿಕೆ ಹಾಕಿಲ್ಲ. ನನ್ನ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನ ಜಗಳವಾಗಿರುತ್ತದೆ ಆ ಸಿಟ್ಟಿನಲ್ಲಿ ನಾನು ದೂರನ್ನು ಸಲ್ಲಿಸಿರುತ್ತೇನೆ ದೂರಿನಲ್ಲಿ ಬರೆದ ವಿಚಾರ ಗೊತ್ತಿಲ್ಲ. ನಾನು ಪೋಲಿಸರಿಗೆ ಸ್ಥಳವನ್ನು ತೋರಿಸಿರುವುದಿಲ್ಲ. ಪೋಲಿಸರು ಪಂಚನಾಮೆಯನ್ನು ಮಾಡಿರುವುದಿಲ್ಲ, ಸಾಕ್ಷಿಯು ದೂರಿನಲ್ಲಿ ಇದ್ದ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿಲ್ಲ. ಪೋಲಿಸರು ಯಾವುದೇ ವಸ್ತುವನ್ನು ಜಪ್ತಿ ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ಯವರಿಂದಃ**

ದಿಃ 05-09-2023 ರಂದು ಈ ...............ವಿನಂತಿಸಿಕೊಳ್ಳುತ್ತೇನೆ ಅಂತಾ ಹೇಳಿ ಟೈಪ ಮಾಡಿಸಿದ ದೂರು ನಿಜ ಇದೆ ಎಂದು ನಾನು ಪೋಲಿಸರ ಮುಂದೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿಃ 11-09-2023 ರಂದು ನಾನು ...............ನಿಜ ಇದೆ ಅಂತಾ ಹೇಳಿ ಟೈಪ ಮಾಡಿಸಿದ ಮರು ಹೇಳಿಕೆಯನ್ನು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಒಪ್ಪಿಕೊಳ್ಳದ ಸಾಕ್ಷಿಯ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ಓದಿ ಹೇಳಿದ ಹೇಳಿಕೆ ಪೋಲಿಸರ ಮುಂದೆ ಕೊಟ್ಟಿದ್ದರೂ ಸಹ ಆರೋಪಿತರ ಜೊತೆಗೆ ರಾಜಿಯಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಏನು ಇಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**Sd/-**

**ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್. ಸಿ ಬೀದರ.**